# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 567**

**ಮಾನ್ಯ ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ**

**ಉತ್ತರಿಸುವ ದಿನಾಂಕ : 14.08.2025**

**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿದೇಶಗಳಲ್ಲಿ ಉದ್ಯೋಗವಕಾಶ ಕಲ್ಪಿಸುವ ಕರ್ನಾಟಕ ಮತ್ತು ಹೊರ ರಾಜ್ಯದ ನೇಮಕಾತಿ ಏಜೆನ್ಸಿಗಳು ಸಾರ್ವಜನಿಕರನ್ನು ವಂಚಿಸಿದ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; | ಕಳೆದ ಮೂರು ವರ್ಷಗಳಲ್ಲಿ, ವಿದೇಶಗಳಲ್ಲಿ ಉದ್ಯೋಗವಕಾಶ ಕಲ್ಪಿಸುವ ಕರ್ನಾಟಕ ಮತ್ತು ಹೊರ ರಾಜ್ಯದ ನೇಮಕಾತಿ ಏಜೆನ್ಸಿಗಳು ಸಾರ್ವಜನಿಕರನ್ನು ವಂಚಿಸಿದ 36 ಪ್ರಕರಣಗಳು ಬೆಳಕಿಗೆ ಬಂದಿವೆ. |
| ಆ) | ರಾಜ್ಯದಿಂದ ವಿದೇಶದಲ್ಲಿ ಉದ್ಯೋಗವಕಾಶಗಳಿಗೆ ಅವಕಾಶವಿರುವ ಕುರಿತಂತೆ ಮತ್ತು ರಾಜ್ಯದಿಂದ ಒಟ್ಟು ಅರ್ಜಿ ಸಲ್ಲಿಸುವ ಹಾಗೂ ಅದರಲ್ಲಿ ಯಶಸ್ವಿಯಾಗುವ ಮತ್ತು ವಿಫಲರಾಗುವ ಹಾಗೂ ಹಣ ಕಳೆದುಕೊಳ್ಳುವ ಕುರಿತ ಮಾಹಿತಿ ಸರಕಾರದ ಬಳಿಯಿದೆಯೇ; | ಕರ್ನಾಟಕ ರಾಜ್ಯದಿಂದ ವಿದೇಶದಲ್ಲಿ ಉದ್ಯೋಗಾವಕಾಶಗಳಿಗೆ ಅರ್ಜಿ ಸಲ್ಲಿಸಿ ಹಣ ಪಡೆದುಕೊಂಡು ಮೋಸ ಮಾಡಿರುವ 36 ಪ್ರಕರಣಗಳಲ್ಲಿ 74 ಜನರ ಮೇಲೆ ಎಫ್.ಐ.ಆರ್. ದಾಖಲಾಗಿರುತ್ತದೆ. ಒಟ್ಟು 12 ಆರೋಪಿಗಳನ್ನು ಬಂಧಿಸಲಾಗಿರುತ್ತದೆ. ಈ ಪ್ರಕರಣಗಳಲ್ಲಿ ವಂಚನೆಯ ಮೊತ್ತ ರೂ.5,16,19,105/- ಗಳಾಗಿದ್ದು, ಇದರಲ್ಲಿ ರೂ.34,06,771/- ಗಳನ್ನು ನೊಂದವರಿಗೆ ಹಿಂತಿರುಗಿಸಲಾಗಿದೆ. |
| ಇ) | ಕರ್ನಾಟಕ ರಾಜ್ಯದಿಂದ ವಿದೇಶದಲ್ಲಿ ಉದ್ಯೋಗವಕಾಶಗಳಿಗೆ ಅರ್ಜಿ ಸಲ್ಲಿಸಿ ಹಣ ಪಡೆದುಕೊಂಡು ಮೋಸ ಮಾಡಿರುವ ಎಷ್ಟು ಜನರ ಮೇಲೆ ಎಫ್.ಐ.ಆರ್. ದಾಖಲಾಗಿದೆ; ಪ್ರಕರಣಗಳಲ್ಲಿ ಏನು ಕ್ರಮ ವಹಿಸಲಾಗಿದೆ; ಎಷ್ಟು ಹಣ ಹಿಂತಿರುಗಿಸಲಾಗಿದೆ; | |
| ಈ) | ಇಂತಹ ಮಧ್ಯವರ್ತಿಗಳನ್ನು, ಸಂಸ್ಥೆಗಳನ್ನು ನೋಂದಣಿ ಮಾಡುವ, ನಿಯಂತ್ರಿಸುವ ಕಾನೂನುಗಳನ್ನು ರಚಿಸಲು ರಾಜ್ಯ ಸರಕಾರ ಯೋಚಿಸಿದೆಯೇ; ಹಾಗಿದ್ದರೆ ಯಾವಾಗ ಅವುಗಳನ್ನು ರಚಿಸಿ ಜಾರಿಗೆ ತರಲಾಗುವುದು; | ಪ್ರಸ್ತುತ ಇಂತಹ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 62 ಪಿಸಿಕ್ಯೂ 2025**

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು